ಕರ್ನಾಟಕದ ಆಡಳಿತಭಾಷೆ

(ಕೆಲವು ಅಭಿಪ್ರಾಯಗಳು)

'.. ೫ನೇ ಶತಮಾನದಿಂದ ೧೬ನೇ ಶತಮಾನದವರೆಗೆ ಕನ್ನಡ ನಾಡಿನಲ್ಲಿ ಶಾತವಾಹನರು, ರಾಷ್ಟ್ರಕೂಟರು, ಗಂಗರು, ಹೊಯ್ಸಳರು ಮುಂತಾದ ಬೇರೆಬೇರೆ ಅರಸು ಮನೆತನಗಳವರು ರಾಜ್ಯವಾಳುತ್ತ ಬಂದಿದ್ದರೂ, ಆಡಳಿತಭಾಷೆ ಕನ್ನಡವೇ ಆಗಿತ್ತು ಎಂಬುದು ಸ್ಪಷ್ಟವಾಗಿದೆ. ಇದು ಸಾಹಿತ್ಯದ ಭಾಷೆಗಿಂತ ಭಿನ್ನವಾದುದು.'

ಡಾ॥ ಬಾ. ರಾ. ಗೋಪಾಲ್

'....ವಿಜಯನಗರ ಸಾಮ್ರಾಜ್ಯ ವಿಸ್ತಾರಗೊಂಡು ತೆಲುಗು ತಮಿಳು ಭಾಷಾ ಪ್ರದೇಶಗಳನ್ನು ಒಳಗೊಂಡದ್ದರಿಂದ ಆಯಾ ಪ್ರದೇಶಗಳ ಪ್ರಜಾ ಭಾಷೆಯನ್ನೇ ಅಲ್ಲಲ್ಲಿ ಬಳಸುವ ಸತ್ಸಂಪ್ರದಾಯವನ್ನೇ ಅವರು ಅನುಸರಿಸಿದರು. ಆದರೆ ಕನ್ನಡ ಪ್ರದೇಶದಲ್ಲಿ ಕನ್ನಡವೇ ಸಂಪೂರ್ಣವಾಗಿ ಆಡಳಿತಭಾಷೆಯಾಗಿತ್ತು..... ಕಡೆಕಡೆಯು ವಿಜಯನಗರದ ಅರಸರು ತೆಲುಗು ಮನೆತನದವರಾದರೂ 'ಕನ್ನಡ ರಾಜ್ಯರಮಾರಮಣ' ರೆಂಬ ಪರಂಪರಾಗತ ಬಿರುದಿನ ಮರ್ಯಾದೆಯನ್ನು ಕಾಯ್ದುಕೊಂಡು ಬಂದರು.' ದೊರೆಗಳ ಸಹಿಮಾತ್ರ ಯಾವಾಗಲೂ ಕನ್ನಡದಲ್ಲೇ ಇರುತ್ತಿತ್ತು.'

ಡಾ॥ ಸೂರ್ಯನಾಥ ಕಾಮತ್

'ಹೈದರಾಲಿ ಕನ್ನಡದ ಅಭಿಮಾನಿಯಾದುದರಿಂದ ಕನ್ನಡ ಭಾಷೆಯನ್ನು ಉಳಿಸಿಕೊಂಡು ಒಡೆಯರು ಹಾಕಿಕೊಟ್ಟ ಚೌಕಟ್ಟಿನೊಳಗೆ ರಾಜ್ಯಭಾರ ನಿರ್ವಹಿಸಿದನು; ಟಿಪ್ಪು ಕನ್ನಡ ಭಾಷೆಯ ಬಗ್ಗೆ ತನ್ನ ತಂದೆಯ ನೀತಿಯನ್ನೇ ಅನುಸರಿಸಿದನು. ಸರಕಾರದ ಆಡಳಿತ ವಿಭಾಗದಲ್ಲಿ ಕನ್ನಡಿಗರೇ ಅಧಿಕಾರಿಗಳಾಗಿ ಇರುತ್ತಿದ್ದರು. ಈ ಕಾರಣಗಳಿಂದ ಅವರ ಕಾಲದಲ್ಲಿ ಕನ್ನಡ ಆಡಳಿತ ಭಾಷೆಯಾಗಿ, ಅಧಿಕೃತ ಭಾಷೆಯಾಗಿ, ರಾಜ್ಯದ ಪ್ರಥಮ ಭಾಷೆಯಾಗಿ ಮೆರೆಯಿತು.'

—ಡಾ॥ ಬಿ. ಮುದ್ದಾಚಾರ್

'ಕರ್ನಾಟಕದ ರತ್ನ ಸಿಂಹಾಸನಾಧೀಶ್ವರರೆಂದು ಪ್ರಸಿದ್ಧರಾದ ಮೈಸೂರು ಸಂಸ್ಥಾನದ ಒಡೆಯರು ವಿಜಯನಗರ ಸಾಮ್ರಾಜ್ಯ ಸಂಪ್ರದಾಯವನ್ನೇ ..... ನಡೆಸಿಕೊಂಡು ಬಂದರು. ದೇಶದಲ್ಲೆಲ್ಲಾ ಆಂಗ್ಲ ಪ್ರಭುತ್ವ ಬಂದಮೇಲೆ, ಗ್ರಾಮಾಡಳಿತದಲ್ಲಿ ಕೂಡ ಇಂಗ್ಲಿಷು ಇಳಿದಿರುವುದು.'

—ಡಾ॥ ಎಚ್. ಎ. ಶ್ರೀನಿವಾಸ ಮೂರ್ತಿ.

ಆಡಳಿತ ಭಾಷೆಯ ಸಮಸ್ಯೆಗಳು

' ಯಾವ ಮಾರ್ಗಗಳಿಂದ ಇಂಗ್ಲಿಷು ನಮ್ಮ ಜನಜೀವನದ ಮೇಲೆ ಪ್ರಭುತ್ವ ಮಾಡತೊಡಗಿತೊ ಆ ಮಾರ್ಗಗಳಲ್ಲಿಯೇ ಅದರ ನಿರ್ಗಮನವಾಗಬೇಕು. ಎಂದರೆ— (೧) ನಮ್ಮ ನಿತ್ಯ ವ್ಯವಹಾರಗಳಲ್ಲಿ ಕನ್ನಡಕ್ಕೆ ಅಗ್ರಸ್ಥಾನ. (೨) ವಿದ್ಯಾಭ್ಯಾಸದ ಮೊದಲ ಹಂತದಿಂದ—ಸ್ನಾನಕೋತ್ತರ ಹಂತದವರೆಗೆ ವಿದ್ಯಾಭ್ಯಾಸ ಕನ್ನಡದ ಮೂಲಕವಾಗಿಯೇ ! (೩) ಸರ್ಕಾರದ ಆಡಳಿತಭಾಷೆ ಮಂತ್ರಿಮಂಡಲ ವ್ಯವಹಾರಮಟ್ಟದವರೆಗೆ ಕನ್ನಡ.

ಆವಶ್ಯಕತೆ, ಔಚಿತ್ಯಗಳನ್ನು ಮರೆಯದೆ ಎಲ್ಲಿಂದಲೂ ಪದಸಂಗ್ರಹ ಮಾಡಲು ಹಿಂಜರಿಯಬಾರದು. ನಮ್ಮ ಪ್ರತ್ಯಯದ ಮುದ್ರೆಯೊತ್ತಿದ ಶಬ್ದಗಳೆಲ್ಲ ನಮ್ಮವೇ ! ಆವಶ್ಯಕತೆ ಔಚಿತ್ಯಗಳಿಗೆ ತಕ್ಕಂತೆ ಶಬ್ದಗಳನ್ನಾಯ್ದು ಜೋಡಿಸಿಕೊಳ್ಳುವ ಸ್ವಾತಂತ್ರ್ಯದಲ್ಲಿ ಕುಮಾರವ್ಯಾಸ ನಮಗೆ ಗುರುವಾಗಿದ್ದಾನೆ. ಬೇರೆ ಭಾಷೆಗಳು ಬೇಕು.— ನಮ್ಮ ಮೇಲೆ ಕೈ ನಡೆಸುವುದಕ್ಕಲ್ಲ ; ನಮ್ಮ ಬಲವನ್ನು ಹೆಚ್ಚಿಸುವುದಕ್ಕೆ.

—ವಿ. ಸೀತಾರಾಮಯ್ಯ.

ಸಂಸತ್ತಿನ ನಿರ್ಣಯ

ಸಂಸತ್ತಿನ ಕೆಳಮನೆ ಮೇಲ್ಮನೆಗಳಲ್ಲಿ " ಕರ್ನಾಟಕ " ದ ಚರ್ಚೆ ಇದೇ ಜುಲೈ ೨೭–೭–೭೩ ಹಾಗು ೮–೮–೭೩ ರಂದು ನಡೆದು ಕರ್ನಾಟಕ ನಾಮಕರಣ ೧-೧-೭೩ ರಂದು ಕೊನೆಯದಾಗಿ ಸ್ವೀಕೃತವಾಯಿತು. ಆ ಪ್ರಸ್ತಾಪವನ್ನು ಮಾನ್ಯ ಕೇ. ಸಿ. ಪಂತರು ಸಾಕ್ಷಾತ್ ಕನ್ನಡತ್ವದ ಅವತಾರವೇನೋ ಎಂಬಂತೆ ಮಂಡಿಸಿದರು, ಪ್ರತಿಪಾದಿಸಿದರು. ಇಡೀ ದೇಶವೇ ಹೌದೆನ್ನುವ ರೀತಿಯಲ್ಲಿ ಅದನ್ನು ತೇರ್ಗಡೆಗೊಳಿಸಿದರು. ಅವರ ಆ ಧುರೀಣತ್ವಕ್ಕೆ ಕನ್ನಡಿಗರು ಶ್ರೀ ದೇವರಾಜ ಅರಸರಿಗೆಷ್ಟೊ ಅಷ್ಟೇ ಋಣಿಯಾಗಿರಬೇಕಾಗಿದೆ. ನಮ್ಮ ನಾಡಿನ ಜನತೆ ತೋರಿದ ೧೬ ವರ್ಷದ ತಾಳ್ಮೆ, ಹೊಂದಾಣಿಕೆಯ ಧೋರಣೆಯನ್ನು ಅವರು ವಿಂಕ್ಷವರಿಗೆ ಮಾದರಿಯೆಂಬಂತೆ ಹೊಗಳಿ, ' ಕರ್ನಾಟಕ ' ರಾಷ್ಟ್ರೀಯ ಭಾವೈಕ್ಯತೆಗೆ ಹಿರಿ-ಸಾಧನವೂ. ಮಾದರಿ ರಾಜ್ಯದ ಪ್ರತೀಕವೂ ಆಗಿ ಚಿರಾಯುವಾಗಲಿ ಎಂದು ಹರಿಸಿದ್ದಾರೆ. ಅವರಿಗೂ, ಅವರಿಗೆ ಸಾಮರ್ಥ್ಯ ಪೂರ್ಣ ಬೆಂಬಲವಿತ್ತ ಕರ್ನಾಟಕ ಹದಿನೇಳೂ ಸಂಸತ್ ಸದಸ್ಯರಿಗೂ ನಮ್ಮ ಅನಂತಾನಂತ ಧನ್ಯವಾದಗಳು.